ನವಚೇತನ ಎಜುಕೇಶನ್ ಸ್ಪರ್ಧಾ ವಿಕಾಸ

# GPSTR - 15000 ಶಿಕ್ಷಕರ ನೇಮಕಾತಿ

ವಿಷಯ : ಕನ್ನಡ

ಸಮಯ : 2.30 ಗಂಟೆ | ನಿರ್ದಿಷ್ಟ ಪತ್ರಿಕೆ : 03 | ಅಂಕಗಳು : 100

**I ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ :–**

**1. ಕೊಟ್ಟಿರುವ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ:– 5X1=5**

ಎ) ಲಪ್ಪಟೆ ಬಿ) ಮರ್ಜಿ
ಸಿ) ತುಕಡಿ ಡಿ) ಖಜಾನೆ
ಇ) ಸನ್ನದ್ಧ

**2. ಕೊಟ್ಟಿರುವ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ. 5X1=5**

ಎ) ಒಳಿತು X ಬಿ) ಬಲ X
ಸಿ) ಬೇಗ X ಡಿ) ಸಮಷ್ಟಿ X
ಇ) ಪ್ರಸಿದ್ಧ X

**3. ಕೊಟ್ಟಿರುವ ನುಡಿಗಟ್ಟುಗಳ ಅರ್ಥವನ್ನು ಬರೆಯಿರಿ:– 5X1=5**

ಎ) ಅಟ್ಟಕ್ಕೇರಿಸು –
ಬಿ) ಗುಡ್ಡವನ್ನು ಬೆಟ್ಟಮಾಡು –
ಸಿ) ಯಮಸಾಹಸ –
ಡಿ) ಮುಖ ಕಪ್ಪಾಗು –
ಇ) ಕೈ ಕಚ್ಚು –

**4. ಕೊಟ್ಟಿರುವ ಗಾದೆಗಳನ್ನು ಪೂರ್ಣಗೊಳಿಸಿ:– 5X1=5**

ಎ) ಹಣವಿಲ್ಲದವನು ..........................
ಬಿ) ಊಟಕ್ಕೆ ಮುಂದಿರಬೇಕು ..........................
ಸಿ) ಉದ್ದುದ್ದ ಮಾತಿನವರ ..........................
ಡಿ) ಅಳಿಲ ಭಕ್ತಿ ..........................
ಇ) ಅಕ್ಕ ಸತ್ತರೆ ..........................

**II ಕೊಟ್ಟಿರುವ ಪದಗಳಿಗೆ ನೀಡಿರುವ ಸೂಚನೆಯಂತೆ ಉತ್ತರ ಬರೆಯಿರಿ.**

**5. ಕೊಟ್ಟಿರುವ ಪದಗಳು ಯಾವ ಭಾಷೆಯಿಂದ ಕನ್ನಡಕ್ಕೆ ಬಂದಿದೆ ತಿಳಿಸಿ. 2X1=2**

ಎ) ಅಮಾನತು ಬಿ) ದಲ್ಲಾಳಿ

**6. ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆದು, ಸಂಧಿಯನ್ನು ಹೆಸರಿಸಿ. 2X1=2**

ಎ) ತಾಸಾಗಿದೆ ಬಿ) ಮನ್ವಂತರ

**7. ಕೊಟ್ಟಿರುವ ಪದಗಳನ್ನು ವಿಗ್ರಹವಾಕ್ಯ ಮಾಡಿ ಸಮಾಸವನ್ನು ಹೆಸರಿಸಿರಿ. 2X1=2**

ಎ) ತಲೆನೋವು ಬಿ) ನೀರುಣಿಸು

**8. ಕೊಟ್ಟಿರುವ ಪದಗಳನ್ನು ಬಳಸಿ ಸ್ವಂತ ವಾಕ್ಯವನ್ನು ಮಾಡಿ. 2X1=2**

ಎ) ಪ್ರಯತ್ನ ಬಿ) ಅಭಿರುಚಿ

**9. ಕೊಟ್ಟಿರುವ ಹೇಳಿಕೆಗಳನ್ನು ಸೂಕ್ತವಾದ ಪದವನ್ನು ಬರೆಯಿರಿ. 2X1=2**

ಎ) ಯೋಚಿಸಿ ಕೆಲಸ ಮಾಡುವವನು
ಬಿ) ನಿರಂತರ ಕೆಲಸ ಮಾಡುವವನು

**10. ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆದು ವಿಭಕ್ತಿಯನ್ನು ಹೆಸರಿಸಿರಿ. 2X1=2**

ಎ) ಶಾಲೆಯಿಂದ ಬಿ) ಮನೆಕಡೆಗೆ

**11. ಕೊಟ್ಟಿರುವ ವಾಕ್ಯಗಳಲ್ಲಿ ಬಂದಿರುವ ಸರ್ವನಾಮ ಪದವನ್ನು ಆರಿಸಿ ಬರೆಯಿರಿ. 2X1=2**

ಎ) ಗೌರಿ ನನ್ನ ತಂಗಿಗೆ ಪುಸ್ತಕವನ್ನು ಕೊಟ್ಟಳು.
ಬಿ) ನೀವು ಆದಷ್ಟು ಬೇಗ ಬನ್ನಿ.

**12. ಕೊಟ್ಟಿರುವ ಪದಗಳಿಗೆ ಬಂದಿರುವ ಅವ್ಯಯ ಪದಗಳನ್ನು ಆರಿಸಿ ಬರೆಯಿರಿ. 2X1=2**

ಎ) ರಾಧೆಯು ಸೊಗಸಾಗಿ ಹಾಡಿದಳು.
ಬಿ) ಕಾಡಿನಲ್ಲಿ ಬೆಂಕಿಯು ಧಗಧಗನೆ ಉರಿಯುತ್ತಿತ್ತು.

**13. ಕೊಟ್ಟಿರುವ ವಾಕ್ಯಗಳ ವಚನವನ್ನು ಬದಲಿಸಿ ಬರೆಯಿರಿ:– 2X1=2**

ಎ) ಹುಡುಗರು ಆಟವನ್ನು ಆಡಿದರು.
ಬಿ) ನದಿಯು ಮಳೆಗಾಲದಲ್ಲಿ ತುಂಬಿ ಹರಿಯುತ್ತದೆ.

**14. ಮೊದಲೆರಡು ಪದಗಳಿಗೆ ಇರುವ ಸಂಬಂಧವನ್ನು ಗುರುತಿಸಿ ಮೂರನೇಯ ಪದಕ್ಕೆ ಸರಿ ಸಂಬಂಧ ಹೊಂದುವ ಪದವನ್ನು ಬರೆಯಿರಿ:– 2X1=2**

ಎ) ನಮೋ ನಮೋ : ದ್ವಿರುಕ್ತಿ :: ಧೀರ ಶೂರ : ..........
ಬಿ) ನದಿ, ಪರ್ವತ : ರೂಢನಾಮ :: ವ್ಯಾಪಾರಿ, ವಿಜ್ಞಾನಿ : ..........

**15. ಕೊಟ್ಟಿರುವ ವಾಕ್ಯಗಳನ್ನು ವರ್ತಮಾನ ಕಾಲಕ್ಕೆ ಪರಿವರ್ತಿಸಿ ಬರೆಯಿರಿ:– 2X1=2**

ಎ) ಸುರೇಶನು ಕಥೆಯನ್ನು ಹೇಳಿದನು.
ಬಿ) ವಿದ್ಯಾರ್ಥಿಗಳು ವ್ಯಾಯಾಮವನ್ನು ಮಾಡಿದರು.

**16. ಕೊಟ್ಟಿರುವ ಪದಗಳಿಗೆ ತತ್ಸಮ–ತದ್ಭವಗಳನ್ನು ಬರೆಯಿರಿ. 2X1=2**

ಎ) ಪ್ರಾಣ ಬಿ) ಸಿರಿ

**17. ಕೊಟ್ಟಿರುವ ವಾಕ್ಯಗಳಲ್ಲಿ ಸೂಕ್ತವಾದ ಲೇಖನ ಚಿಹ್ನೆಯನ್ನು ಹಾಕಿ ಬರೆಯಿರಿ:– 2X1=2**

ಎ) ವಿಶ್ವೇಶ್ವರಯ್ಯನವರ ಸಾಧನೆಯನ್ನು ಗುರುತಿಸಿ ಭಾರತ ಸರ್ಕಾರ ಅವರಿಗೆ ಭಾರತ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಿತು.
ಬಿ) ಆಹಾ ಗುಲಾಬಿ ಹೂವು ಬಹಳ ಸುಂದರವಾಗಿದೆ.

**18. ಕೊಟ್ಟಿರುವ ಪದಗಳಿಗೆ ಗ್ರಾಂಥಿಕ ರೂಪವನ್ನು ಬರೆಯಿರಿ:– 2X1=2**

ಎ) ವ್ಯಾಗ ಬಿ) ಇಲ್ಲದ್ದಂಗ

**19. ಕೊಟ್ಟಿರುವ ವಾಕ್ಯಗಳಲ್ಲಿ ಜೋಡುನುಡಿ / ದ್ವಿರುಕ್ತಿಗಳನ್ನು ಗುರುತಿಸಿ ಬರೆಯಿರಿ:– 2X1=2**

ಎ) ಮಳೆ ಬರುವ ಸೂಚನೆ ಕಂಡು ಜನರು ಬೇಗಬೇಗ ಮನೆಗಳಿಗೆ ಹೊರಟರು.
ಬಿ) ಮನೆಯು ಮಕ್ಕಳುಮರಿಗಳಿಂದ ತುಂಬಿತ್ತು.

**20. ಕೊಟ್ಟಿರುವ ಗದ್ಯಭಾಗಗಳನ್ನು ಓದಿ ಅರ್ಥೈಸಿಕೊಂಡು ಅವುಗಳ ಮುಂದೆ ನೀಡಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:–5X4=20**

**ಗದ್ಯಭಾಗ : 1**

ಸಾಮಾನ್ಯವಾಗಿ ಆಹಾರ, ಅರಿವೆ, ಆಸರೆ ಈ ಮೂರನ್ನು ಮಾತ್ರ ಮಾನವನ ಮೂಲಭೂತ ಅವಶ್ಯಕತೆಗಳೆಂದು ಗುರುತಿಸಲಾಗುತ್ತದೆಯಾದರೂ ಅರಿವು ಕೂಡ ಮಾನವನ ಜೀವನಕ್ಕೆ ಅಷ್ಟೇ ಅವಶ್ಯವಾದಂತಹ ಒಂದು ಸಾಧನ. ಮಾನವನನ್ನು ಪ್ರಾಣಿ ಸ್ಥಿತಿಯಿಂದ ಮೇಲೆತ್ತುವುದೇ ಜ್ಞಾನಾರ್ಜನೆ. ತನ್ನ ಸುತ್ತಮುತ್ತಣ ಪ್ರಪಂಚದ ಬಗ್ಗೆ ಮಾನವ ಶಿಶು ಅರಿವನ್ನು ಪಡೆಯುವ ಪ್ರಕ್ರಿಯೆಯನ್ನು ಸಾಮಾಜೀಕರಣ ಎಂದು ಕರೆಯುತ್ತಾರೆ. ಶಿಕ್ಷಣ ಈ ಸಾಮಾಜೀಕರಣದ ಪ್ರಮುಖ ಸಾಧನಗಳಲ್ಲಿ ಒಂದು. ಶಿಕ್ಷಣದ ಪ್ರಕ್ರಿಯೆಯ ಮೂಲಕ ವ್ಯಕ್ತಿಗಳೆಲ್ಲ ಆಯಾ ಸಮಾಜದಲ್ಲಿ ಜಾರಿಯಲ್ಲಿರುವಂತಹ ಸಾಂಸ್ಕೃತಿಕ ಮೌಲ್ಯಗಳ ಬಗ್ಗೆ ತಿಳಿವಳಿಕೆಯನ್ನು ಪಡೆಯುತ್ತಾರೆ. ಕಲಿಕೆಯ ಪ್ರಕ್ರಿಯೆಯಲ್ಲಿಯೇ ಜೀವನವನ್ನು ಕುರಿತು ದೃಷ್ಟಿಕೋನ ಗಳನ್ನು ವ್ಯಕ್ತಿಗಳು ಬೆಳೆಸಿಕೊಳ್ಳುತ್ತಾರೆ. ಸಮಾಜದ ಇತಿಹಾದ, ಸಾಧನೆಗಳು, ಧರ್ಮ, ಭಾಷೆ, ಮೌಲ್ಯಗಳು, ಸಾಹಿತ್ಯ, ಕಲೆ, ತಾಂತ್ರಿಕ ಜ್ಞಾನ ಇವೇ ಮುಂತಾದ ಸಂಸ್ಕೃತಿಯ ಎಲ್ಲಾ ಅಂಶಗಳನ್ನು ಶಿಕ್ಷಣ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ವರ್ಗಾಯಿಸುತ್ತದೆ.

**ಪ್ರಶ್ನೆಗಳು :**

ಎ) ಸಾಮಾನ್ಯವಾಗಿ ಗುರುತಿಸಲಾಗುವ ಮಾನವನ ಮೂಲಭೂತ ಅವಶ್ಯಕತೆಗಳು ಯಾವುವು ?

ಬಿ) ಮಾನವನನ್ನು ಪ್ರಾಣಿ ಸ್ಥಿತಿಯಿಂದ ಮೇಲೆತ್ತುವುದು ಯಾವುದು ?

ಸಿ) ಸಾಮಾಜೀಕರಣ ಎಂದರೇನು ?

ಡಿ) ವ್ಯಕ್ತಿಗಳು ಯಾವುದರ ಮೂಲಕ ಸಾಂಸ್ಕೃತಿಕ ಮೌಲ್ಯಗಳ ತಿಳಿವಳಿಕೆ ಪಡೆಯುತ್ತಾರೆ ?

ಇ) ಸಂಸ್ಕೃತಿಯ ಅಂಶಗಳನ್ನು ಶಿಕ್ಷಣವು ಹೇಗೆ ವರ್ಗಾಯಿಸುತ್ತದೆ?

**ಗದ್ಯಭಾಗ – 2**

ಹಳೇಬೀಡಿನಲ್ಲಿ ಹೊಯ್ಸಳೇಶ್ವರ ದೇವಾಲಯ ಹಾಗೂ ಬೇಲೂರಿನಲ್ಲಿ ಚೆನ್ನಕೇಶವ ದೇವಾಲಯಗಳೆಂಬ ಪ್ರಸಿದ್ಧ ದೇವಸ್ಥಾನಗಳಿವೆ. ಬೇಲೂರು ದೇವಸ್ಥಾನವನ್ನು ಕಟ್ಟಿಸಿದ ರಾಜನ ಹೆಸರು ಹೊಯ್ಸಳ ವಿಷ್ಣುವರ್ಧನ. ಇವನು ರಾಜ್ಯಭಾರ ಮಾಡುತ್ತಾ ಇದ್ದ ಕಾಲದಲ್ಲಿ ಕರ್ನಾಟಕ ಶಿಲ್ಪಕಲೆಯಲ್ಲಿ ಸುವರ್ಣಯುಗವನ್ನು ಕಂಡಿತ್ತು. ವಿಷ್ಣುವರ್ಧನನ ಹೆಂಡತಿ ಶಾಂತಲಾದೇವಿ 'ನಾಟ್ಯರಾಣಿ' ಎಂಬ ಬಿರುದು ಪಡೆದವಳು. ಇವಳು ನಾಟ್ಯ ಕಲೆಗೆ ಸಲ್ಲಿಸಿದ ಕಾಣಿಕೆ ಅಪಾರ, ಹಳೇಬೀಡು ದೇವಸ್ಥಾನ ಕಟ್ಟಿಸಿದವನು ಕೇತುಮಲ್ಲ ಅವನು ವಿಷ್ಣುವರ್ಧನನ ದಂಡನಾಯಕನಾಗಿದ್ದ. ಹಿಂದೆ ಹಳೇಬೀಡಿಗೆ ಇದ್ದ ಹೆಸರು ದ್ವಾರಸಮುದ್ರ ಎಂದು. ಹೊಯ್ಸಳರ ರಾಜಧಾನಿಯಾಗಿದ್ದ ದ್ವಾರಸಮುದ್ರ ಮೊಘಲರ ಆಕ್ರಮಣದಿಂದ ಹಾಳಾಯಿತು. ಹಾಳಾದ ಊರಿಗೆ ಹಳೇಬೀಡು ಎಂದು ಹೆಸರು ಬಂತು 'ಮೇಲಾಪುರ' ಎಂದು ಪುರಾಣಗಳಲ್ಲಿ ಪ್ರಸಿದ್ಧವಾದ ಪ್ರದೇಶ ಈಗ ಬೇಲೂರು ಎಂದಾಗಿದೆ.

**ಪ್ರಶ್ನೆಗಳು :**

ಎ) ಚೆನ್ನಕೇಶವ ದೇವಾಲಯವನ್ನು ಕಟ್ಟಿಸಿದವರು ಯಾರು ?

ಬಿ) ನಾಟ್ಯರಾಣಿ ಎಂಬ ಬಿರುದು ಯಾರಿಗಿತ್ತು ?

ಸಿ) ರಾಜ ವಿಷ್ಣುವರ್ಧನನ ದಂಡನಾಯಕ ಯಾರು ?

ಡಿ) ಹೊಯ್ಸಳರ ರಾಜಧಾನಿ ಯಾವುದು ?

ಇ) ಪುರಾಣಗಳಲ್ಲಿ ಬೇಲೂರಿಗೆ ಯಾವ ಹೆಸರು ಇದೆ ?

**ಗದ್ಯಭಾಗ – 3**

ನೆಲ್ಸನ್ ಮಂಡೇಲಾ ದಕ್ಷಿಣ ಆಫ್ರಿಕಾದ ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿಯ ಕೇಂದ್ರ. ಬಿಳಿಯರು ಆಡಳಿತ ನಡೆಸುತ್ತಿದ್ದ ತಮ್ಮ ತಾಯ್ನಾಡಿನಲ್ಲಿ ಅವರ ವರ್ಣದ್ವೇಷ, ದಬ್ಬಾಳಿಕೆ, ಶೋಷಣೆಗಳಿಗೆ ಒಳಗಾದ ತಮ್ಮ ಜನರ ಉದ್ಧಾರಕ್ಕಾಗಿ ಕಂಕಣತೊಟ್ಟರು ಆ ಬಳಿಕ ಬಿಳಿಯರ ವರ್ಣಭೇದದ ವಿರುದ್ಧ ಅವರ ಹೋರಾಟ ನಿರಂತರವಾಗಿ ನಡೆಯಿತು. ಬಿಳಿಯರ ಸರ್ಕಾರ ಅವರನ್ನು ಬಂಧಿಸಿ ಜೀವಾವಧಿ ಶಿಕ್ಷೆ ನೀಡಿತ್ತು. ಇಪ್ಪತ್ತೇಳು ವರ್ಷಗಳ ಸೆರೆಮನೆವಾಸ ಅನುಭವಿಸಿ ಬಿಡುಗಡೆಯಾದ ಮೇಲೆ ಹೋರಾಟ ಮುಂದುವರೆಸಿದರು. ರಾಷ್ಟ್ರ ಸ್ವತಂತ್ರಗೊಂಡಾಗ ಅದರ ಪ್ರಥಮ ಅಧ್ಯಕ್ಷರಾದರು. ಮಹಾತ್ಮ ಗಾಂಧೀಜಿ ಯವರಿಂದ ಪ್ರೇರಣೆ ಪಡೆದಿದ್ದ ನೆಲ್ಸನ್ ಮಂಡೇಲಾ, ಮಹಾತ್ಮರು ಬೋಧಿಸಿದ ಸತ್ಯ, ಅಹಿಂಸೆ, ಪ್ರೀತಿ ಇವುಗಳನ್ನೇ ತಮ್ಮ ಹೋರಾಟದ ಮಾರ್ಗವನ್ನಾಗಿಸಿಕೊಂಡಿದ್ದರು. ಭಾರತ ದೇಶವು ಅವರಿಗೆ ದೇಶದ ಅತ್ಯುನ್ನತ ಪ್ರಶಸ್ತಿಯಾದ 'ಭಾರತರತ್ನ' ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದೆ.

**ಪ್ರಶ್ನೆಗಳು:**

ಎ) ನೆಲ್ಸನ್ ಮಂಡೇಲಾ ಯಾವ ದೇಶದವರು ?

ಬಿ) ನೆಲ್ಸನ್ ಮಂಡೇಲಾರವರ ಹೋರಾಟ ಯಾವುದರ ವಿರುದ್ಧ ನಡೆಯಿತು ?

ಸಿ) ನೆಲ್ಸನ್ ಮಂಡೇಲಾ ಎಷ್ಟು ವರ್ಷಗಳ ಕಾಲ ಸೆರೆಮನೆಯಲ್ಲಿದ್ದರು ?

ಡಿ) ನೆಲ್ಸನ್ ಮಂಡೇಲಾ ತಮ್ಮ ಹೋರಾಟಕ್ಕೆ ಯಾರಿಂದ ಪ್ರೇರಣೆ ಪಡೆದಿದ್ದರು ?

ಇ) ನೆಲ್ಸನ್ ಮಂಡೇಲಾರಿಗೆ ಭಾರತ ಸರ್ಕಾರ ನೀಡಿದ ಪ್ರಶಸ್ತಿ ಯಾವುದು ?

**ಗದ್ಯಭಾಗ : 4**

ಕಾಯಕವನ್ನು ಪ್ರಪ್ರಥಮ ಬಾರಿಗೆ ಸೈದ್ಧಾಂತಿಕ ತಳಹದಿಯ ಮೇಲೆ ರೂಪಿಸಿದವರು ಶಿವಶರಣರು. ಅವರು ಕೈಗೊಂಡ ಧಾರ್ಮಿಕ ಚಳುವಳಿಯ ಸಾಮಾಜಿಕ ಏಕತೆಗೆ ಈ ಕಾಯಕದ ಪರಿಕಲ್ಪನೆ ಕಾಕಲ್ಪವೆನಿಸಿತು. ಧರ್ಮಪರ ಸಂಸ್ಕೃತಿಯಲ್ಲಿ ಆರ್ಥಿಕ ಸಮಾನತೆಯ ದೃಢತೆಗೆ ಇದು ಪ್ರಥಮ ಹೆಜ್ಜೆ. ನಿಜವಾದ ಆರ್ಥಿಕ ಸಮಾನತೆಯೆಂದರೆ ದುಡಿಯುವ ಹಕ್ಕಿಗೆ ಪಡೆಯುವ ಸಮಾನ ಪ್ರತಿಫಲ ಕಾರ್ಲ್‌ಮಾರ್ಕ್ಸ್‌ನ ಆರ್ಥಿಕ ಸಿದ್ಧಾಂತಕ್ಕೂ ಶರಣರ ಕಾಯಕದ ಪರಿಕಲ್ಪನೆಗೂ ಕೆಲವು ವಿಷಯಗಳಲ್ಲಿ ಸಾಮ್ಯತೆ ಕಂಡು ಬರುತ್ತದೆ. ಅದರಂತೆ ಮೂಲಭೂತ ಉದ್ದೇಶದಲ್ಲಿಯೂ ಕೆಲವು ವ್ಯತ್ಯಾಸಗಳು ಗೋಚರಿಸುತ್ತವೆ. ಕಾಯಕವನ್ನು ಜನಪರ ಮೌಲ್ಯವಾಗಿಸಿದ ಶರಣರ ಹೋರಾಟ ನಿಜಕ್ಕೂ ಗೌರವಾರ್ಹ. ರಸ್ಕಿನ್‌ನ ಕೃತಿಯನ್ನೋದಿ ದೈಹಿಕ ಶ್ರಮದ ಮಹತ್ವವನ್ನು ಅರಿತ ಗಾಂಧೀಜಿಯವರು, ಅದನ್ನು ದೇಶಕ್ಕೆ ಹೇಗೆ ಪ್ರತಿಪಾದಿಸಿದರೋ ಅದನ್ನು ಶರಣರ ವಚನಗಳೇ ಪ್ರತಿಪಾದಿಸಿದ್ದವು.

**ಪ್ರಶ್ನೆಗಳು :**

1) ಶಿವಶರಣರು ಕಾಯಕವನ್ನು ಯಾವ ತಳಹದಿಯ ಮೇಲೆ ರೂಪಿಸಿದರು ?

2) ಶಿವಶರಣರ ಕಾಯಕದ ಪರಿಕಲ್ಪನೆ ಯಾವುದಕ್ಕೆ

ಕಾಯಕಲ್ಪವೆನಿಸಿತು ?

3) ನಿಜವಾದ ಆರ್ಥಿಕ ಸಮಾನತೆ ಎಂದರೇನು ?

4) ಕಾಯಕ ಪರಿಕಲ್ಪನೆಯು ಯಾರ ಆರ್ಥಿಕ ಸಿದ್ಧಾಂತಕ್ಕೆ ಸಾಮ್ಯತೆ ತೋರುತ್ತದೆ ?

5) ರಸ್ಕಿನ್‌ನ ಕೃತಿಯಿಂದ ಗಾಂಧೀಜಿಯವರಿಗೆ ಯಾವ ಮಹತ್ವ ತಿಳಿಯಿತು ?

**ಕೊಟ್ಟಿರುವ ಪ್ರಶ್ನೆಗಳಿಗೆ ವಿವರಣಾತ್ಮಕವಾಗಿ ಉತ್ತರ ಬರೆಯಿರಿ.**

**5X4=20**

21. 'ಜಾಗತಿಕ ತಾಪಮಾನದ ಪರಿಣಾಮ' ಈ ವಿಷಯವನ್ನು ಕುರಿತು ಎಂಟು/ಹತ್ತು ವಾಕ್ಯಗಳಲ್ಲಿ ಟಿಪ್ಪಣಿಯನ್ನು ಬರೆಯಿರಿ.

22. 'ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ' ಈ ಗಾದೆಯ ಮಹತ್ವವನ್ನು ವಿಸ್ತರಿಸಿ ಬರೆಯಿರಿ.

23. 'ಆಸೆಯೇ ದುಃಖಕ್ಕೆ ಮೂಲ' ಈ ಹೇಳಿಕೆಯನ್ನು ಕುರಿತು ಎಂಟು/ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

24. ಕೊಟ್ಟಿರುವ ಪದ್ಯಭಾಗವನ್ನು ಓದಿಕೊಂಡು ನಿಮ್ಮ ಮಾತುಗಳಲ್ಲಿ ಸಾರಾಂಶವನ್ನು ಬರೆಯಿರಿ.

ನುಡಿದರೆ ಮುತ್ತಿನ ಹಾರದತಿರಬೇಕು,
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು,
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು,
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು,
ನುಡಿಯೊಳಗಾಗಿ ನಡೆಯದಿದ್ದರೆ ಕೂಡಲ ಸಂಗಮ ದೇವನೆಂತೊಲಿವನಯ್ಯ

**25. ಕೊಟ್ಟಿರುವ ಚಿತ್ರವನ್ನು ಗಮನಿಸಿ ಎಂಟು/ಹತ್ತು ವಾಕ್ಯಗಳಲ್ಲಿ ನಿಮ್ಮ ಅಭಿಪ್ರಾಯವನ್ನು ಬರೆಯಿರಿ. 5X1=5**



**26. ನಿಮ್ಮನ್ನು ಶಿವಮೊಗ್ಗದ ಕುವೆಂಪು ಬಡಾವಣೆಯ 'ಸಂದೇಶ' ಎಂದು ಭಾವಿಸಿಕೊಂಡು ನಿಮ್ಮ ಬಡಾವಣೆಯಲ್ಲಿ ಹೆಚ್ಚುತ್ತಿರುವ ಬೀದಿನಾಯಿಗಳ ಕಾಟವನ್ನು ಪರಿಹರಿಸುವತೆ ಕೋರಿ ನಗರಸಭೆಯ ಅಧ್ಯಕ್ಷರಿಗೆ ಒಂದು ಪತ್ರವನ್ನು ಬರೆಯಿರಿ.**

**5X1=5**

ನವಚೇತನ ಎಜುಕೇಶನ್